

ರೋರಿಕ್ ಅವರ ಪುಸ್ತಕ ಭಂಡಾರ

ಸಂಸ್ಥೆಯಲ್ಲಿ ಸಕ್ರೀಯವಾಗಿ ದುಡಿದರು. 'ರೋರಿಕ್ ಇಂಟರ್‌ನ್ಯಾಷನಲ್ ಬ್ಯಾನರ್ ಆಫ್ ಪೀಸ್' ಆರಂಭಿಸಿದರು. ಇದರ ಮುಖ್ಯ ಉದ್ದೇಶ ವಿಶ್ವದ ಪ್ರಮುಖ ಕಲೆ, ವೈಜ್ಞಾನಿಕ ಸ್ಮಾರಕಗಳು ಮತ್ತು ಕಲಾಸಂಗ್ರಹಗಳನ್ನು ಯುದ್ಧ ಹಾಗೂ ದರೋಡೆಗಳಿಂದ ರಕ್ಷಿಸುವುದು. ವಿಶ್ವದಾದ್ಯಂತ ಸಂಸ್ಕೃತಿ, ಕಲೆ, ಪುರಾತತ್ವ ಕ್ಷೇತ್ರಗಳ ಉತ್ತರೋತ್ತರ ಪ್ರಗತಿ, ಅಭಿವೃದ್ಧಿ, ವಿಕಾಸದ ಹೊಸ ಅಲೆ ಎಬ್ಬಿಸಿದ ರೋರಿಕ್‌ರ ಈ ಪ್ರಯತ್ನಕ್ಕೆ 'ರೋರಿಕ್ ಪ್ಯಾಕ್ಟ್' ಎಂದೇ ನಾಮಕರಣ ಮಾಡಲಾಗಿದೆ. 1935ರಲ್ಲಿ 21 ದೇಶಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಆಗಿನ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದರು. ಅಲ್ಲದೆ ಸೌರ ವ್ಯವಸ್ಥೆಯ ಒಂದು ಸಣ್ಣ ಗ್ರಹಕ್ಕೂ '4426– ರೋರಿಕ್' ಎಂದು ಹೆಸರಿಸಿ ಅವರನ್ನು ಗೌರವಿಸಲಾಗಿದೆ.

ರೋರಿಕ್ ಕೇವಲ ವರ್ಣಚಿತ್ರಕಾರರು ಮಾತ್ರವಲ್ಲ, ಅತ್ಯುತ್ತಮ ಲೇಖಕರೂ ಹೌದು. ಐದು ಸಂಪುಟಗಳ 'ಬುಕ್ಸ್ ಆಫ್ ಲಿವಿಂಗ್ ಎಥಿಕ್ಸ್', 'ಶಂಭಾಲ', 'ಹಾರ್ಟ್ ಆಫ್ ಏಷ್ಯಾ' ಹಾಗೂ ಅಸಂಖ್ಯ ಕೃತಿಗಳನ್ನು ಜಗತ್ತಿಗೆ ನೀಡಿದ್ದಾರೆ. ವಿಶ್ವಶಾಂತಿಗೆ ದುಡಿದ ಇವರಿಗೆ ನೊಬೆಲ್ ಪ್ರಶಸ್ತಿ ನೀಡಲು ಹಲವಾರು ಬಾರಿ ನಾಮಕರಣ ಮಾಡಲಾಯಿತಾದರೂ ಪ್ರಶಸ್ತಿ ಸಿಗಲಿಲ್ಲ. ವಿಶ್ವವನ್ನೇ ಕಾರ್ಯಕ್ಷೇತ್ರ ಮಾಡಿಕೊಂಡು, ವಿಶ್ವದಾದ್ಯಂತ ಕಲಾಕೇಂದ್ರಗಳನ್ನು ಸ್ಥಾಪಿಸಿದ್ದು ಇವರ ವಿಶಿಷ್ಟ ವ್ಯಕ್ತಿತ್ವದ ದರ್ಶನಕ್ಕೆ ಸಾಕ್ಷಿ. ನ್ಯೂಯಾರ್ಕ್‌ನ 'ನಿಕೋಲಸ್ ರೋರಿಕ್ ಮ್ಯೂಸಿಯಂ', ರಷ್ಯಾದ 'ಸೇಂಟ್ ಪೀಟರ್ಸ್‌ಬರ್ಗ್ ಮ್ಯೂಸಿಯಂ', ಬಲ್ಗೇರಿಯಾದ 'ನ್ಯಾಷನಲ್ ಗ್ಯಾಲರಿ ಫಾರ್ ಫಾರಿನ್ ಆರ್ಟ್', ಸರ್ಬಿಯಾದ 'ನ್ಯಾಷನಲ್ ಮ್ಯೂಸಿಯಂ ಆಫ್ ಸರ್ಬಿಯಾ', ಕುಲು ಕಣಿವೆಯ ನಗ್ಗರ್ ನ 'ರೋರಿಕ್ ಹಾಲ್ ಎಸ್ಟೇಟ್' ಮತ್ತು 'ಉರುಸ್ವತಿ ರಿಸರ್ಚ್ ಇನ್ಸ್ಟಿಟ್ಯೂಟ್' ಮತ್ತು ರಷ್ಯಾದ 'ಲಟ್ವಿಯನ್ ನ್ಯಾಷನಲ್ ಮ್ಯೂಸಿಯಂ' ಮುಂತಾಗಿ ಹಲವೆಡೆ ಇವರ ವರ್ಣಚಿತ್ರಗಳ ಬೃಹತ್ ಸಂಗ್ರಹಾಲಯವಿದೆ.




ಡಾಡ್ಜ್ (1930ರ ಮಾಡೆಲ್) ವಾಹನ

ರೋರಿಕ್ ಪತ್ನಿ ಹೆಲೆನಾ ರೋರಿಕ್ ಉತ್ತಮ ಪಿಯಾನೋ ವಾದಕಿ. ಜತೆಗೆ ಬೌದ್ಧ ಧರ್ಮದ ಅನುಯಾಯಿಯಾಗಿ ನೀಡಿದ ಕೊಡುಗೆ ಅಪಾರ. 'ದ ಲಿವಿಂಗ್ ಎಥಿಕ್ಸ್'ನ ರಚನೆಯಲ್ಲಿ ಪತಿಗೆ ಸಹಕಾರ ನೀಡಿದ್ದಲ್ಲದೆ, 'ಫೌಂಡೇಶನ್ ಆಫ್ ಬುದ್ದಿಸಂ' ಹಾಗೂ 'ಆನ್ ಈಸ್ಟರ್ನ್ ಕ್ರಾಸ್ ರೋಡ್ಸ್' ಕೃತಿಗಳನ್ನು ರಚಿಸಿದರು. 'ದ ಅಗ್ನಿ ಯೋಗ ಸೊಸೈಟಿ'ಯನ್ನು ಆರಂಭಿಸಿದ ಇವರ ಸಾಹಿತ್ಯ ಸಂಗ್ರಹವನ್ನು ಹನ್ನೆರಡು ಭಾಷೆಗಳಿಗೆ ಭಾಷಾಂತರಿಸಲಾಗಿದೆ.

ರಷ್ಯಾದಲ್ಲಿ ಜನಿಸಿದ ಜಾರ್ಜ್, ರೋರಿಕ್ ಅವರ ಪ್ರಥಮ ಪುತ್ರ. ಕೇವಲ 23ನೇ ವಯಸ್ಸಿನಲ್ಲೇ ಟಿಬೇಟ್‌ನ ಕಲಾಜಗತ್ತಿನ ಬಗ್ಗೆ ಬರೆದ ಪ್ರಥಮ ಪುಸ್ತಕ ಮುಂದೆ ಇವರ ಜೀವನಗಾಥೆಗೆ ನಾಂದಿ ಹಾಡಿತು. 'ಉರುಸ್ವತಿ ಹಿಮಾಲಯನ್ ರಿಸರ್ಚ್ ಇನ್ಸ್ಟಿಟ್ಯೂಟ್' ಮುಖ್ಯಸ್ಥರಾಗಿ, ಪುರಾತತ್ವ ಹಾಗೂ ಭಾಷಾ ಅಭಿಯಾನದಲ್ಲಿ ತೊಡಗಿಸಿಕೊಂಡವರು. ಪ್ರಪಂಚದ 200ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಕೇಂದ್ರಗಳ ಜತೆಗೆ ನಿಕಟ ಸಂಪರ್ಕ ಹೊಂದಿದ್ದರು. 20 ಭಾಷೆಗಳ ಮೇಲೆ ಪ್ರಭುತ್ವ ಹೊಂದಿದ್ದರು. ಟಿಬೆಟಿಯನ್, ಸಂಸ್ಕೃತ, ಇಂಗ್ಲಿಷ್ ಹಾಗೂ ರಷ್ಯನ್ ಭಾಷೆಯಲ್ಲಿ ಶಬ್ದಕೋಶಗಳನ್ನು ರಚಿಸಿರುವುದು ಇವರ ಬುದ್ಧಿವಂತಿಕೆಗೆ ಸಾಕ್ಷಿ.

ದ್ವಿತೀಯ ಪುತ್ರ ಸ್ವೆತಾಸ್ಲೋವ್ ರೋರಿಕ್, ಚಿತ್ರರಚನೆಯಲ್ಲಿ ತಂದೆಗಿಂತ ಭಿನ್ನಮಾಧ್ಯಮವನ್ನು ತಮ್ಮದಾಗಿಸಿಕೊಂಡು, ಭಾರತದ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾದರು. ಇವರ ವರ್ಣಚಿತ್ರಗಳನ್ನು 'ಯೋಗದಲ್ಲಿಯ ಸೌಂದರ್ಯಾನುಭೂತಿ' ಎಂದು ವರ್ಣಿಸಲಾಗುತ್ತದೆ. ಇವರು ಬಿಡಿಸಿದ ಜವಾಹರಲಾಲ್ ನೆಹರೂ ಮತ್ತು ಇಂದಿರಾಗಾಂಧಿಯವರ ಸುಂದರ ವರ್ಣ ಚಿತ್ರಗಳನ್ನು ಪಾರ್ಲಿಮೆಂಟ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಪ್ರದರ್ಶಿಸಲಾಗಿದೆ. 1945ರಲ್ಲಿ ದೇವಿಕಾರಾಣಿಯವರನ್ನು ವಿವಾಹವಾದ ನಂತರ ಬೆಂಗಳೂರಿನಲ್ಲಿ ನೆಲೆಸಿ ಕರ್ನಾಟಕದ ಕಲಾ ಜಗತ್ತಿಗೆ ಅಪೂರ್ವ ಕೊಡುಗೆ ನೀಡಿದರು. ಚಿತ್ರಕಲಾ ಪರಿಷತ್ತಿನ ಸ್ಥಾಪಕರಲ್ಲೊಬ್ಬರಾಗಿ ಕಲೆಗೆ ಮಹತ್ವದ ಕೊಡುಗೆ ನೀಡಿದರು. ತಂದೆ ಹಾಗೂ ಮಗನ 200ಕ್ಕೂ ಹೆಚ್ಚು ವರ್ಣಚಿತ್ರಗಳು ಚಿತ್ರಕಲಾ ಪರಿಷತ್ತಿನ ಅಮೂಲ್ಯ ಸಂಪತ್ತಾಗಿದೆ. ಸ್ವೆತಾಸ್ಲೊವ್– ದೇವಿಕಾರಾಣಿ ದಂಪತಿ, 60–70ರ ದಶಕದ ಬೆಂಗಳೂರು ಸಾಂಸ್ಕೃತಿಕ ರಂಗದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಮನಾಲಿಯ ಪ್ರವಾಸ ಮುಗಿಸಿದ ಬಳಿಕ ಸೆಳೆತಕ್ಕೆ ಒಳಗಾದಂತೆ ಮತ್ತೊಮ್ಮೆ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ರೋರಿಕ್‌ರವರ 'ತಾತಗುಣಿ ಎಸ್ಟೇಟ್'ಗೆ ಭೇಟಿ ನೀಡಿದೆವು. ಹಿಂದೆ ಭೇಟಿ ನೀಡಿದ್ದಾಗ ಕಲಾ ಜಗತ್ತಿನ ಎರಡು ಧ್ರುವತಾರೆಗಳ ಪ್ರೀತಿಯ ಆವಾಸಸ್ಥಾನದ ಕರುಣಾಜನಕ ಚಿತ್ರ ಮನಸ್ಸನ್ನು ಖಿನ್ನಗೊಳಿಸಿತ್ತು. ಆದರೆ ಈ ಸಲದ ಭೇಟಿಯಲ್ಲಿ ಕರ್ನಾಟಕ ಸರ್ಕಾರ ಜವಾಬ್ದಾರಿ ವಹಿಸಿ ರೋರಿಕ್ ಎಸ್ಟೇಟ್‌ಅನ್ನು ಪುನರುತ್ಥಾನ ಗೊಳಿಸಲು ಸಜ್ಜಾಗಿರುವುದು ಕಂಡು ಸಂತಸವಾಯಿತು.